**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಸಂಸ್ಕರಣೆ/ ಟೆಂಡರ್/01/2015–16/9851 **ದಿನಾಂಕ: 16.04.2015**

**–:<u>ಸಾಗಣೆ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ</u>:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದಂತೆ ಹಾಲಿನ ಟ್ಯಾಂಕರ್‌ಗಳನ್ನು ಮತ್ತು ಕಹಾಮದ ಉತ್ಪನ್ನ ಘಟಕದಿಂದ ಮತ್ತು ಹೊರ ರಾಜ್ಯದ ಡೈರಿಗಳಿಂದ ಹಾಲಿನಪುಡಿ, ಬೆಣ್ಣೆಯ ಸಾಗಾಣಿಕೆಗಾಗಿ ಮತ್ತು ಬಿ.ಎಂ.ಸಿ. ಸರ್ವಿಸ್ ಮಾಡಲು ಬೋಲೆರೋ ಕ್ಯಾಂಪರ್ ವಾಹನಗಳನ್ನು ಒದಗಿಸಲು ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 25.04.2015 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 21.05.2015 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **23.05.2015** ರಂದು ಬೆಳಿಗ್ಗೆ: 11.30 ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: 26**.05.2015** ರಂದು ಬೆಳಿಗ್ಗೆ: **11.30** ಗಂಟೆಗೆ |

**I. ಒಕ್ಕೂಟದ ವ್ಯಾಪ್ತಿಯಲ್ಲಿನ ಬಿ.ಎಂ.ಸಿ ಸಂಘಗಳಿಂದ ಹಾಲು ಸಾಗಾಣಿಕೆ ಮಾಡಲು 9.0 ಟನ್ ಸಾಮರ್ಥ್ಯದ ಹಾಲು ಸಾಗಾಣಿಕೆ ಟ್ಯಾಂಕರ್ ಹೊಂದಿರುವ ಮತ್ತು ಬಿ.ಎಂ.ಸಿ. ಸರ್ವಿಸ್ ಮಾಡಲು ಬೋಲೆರೋ ಕ್ಯಾಂಪರ್ ವಾಹನ ಹೊಂದಿರುವ ಮಾಲೀಕರಿಂದ ಟೆಂಡರ್ ಕರೆಯಲಾಗಿದೆ. ಬಿ.ಎಂ.ಸಿ ಸಂಘಗಳಿಂದ ಹಾಲು ಪರೀಕ್ಷೆ ಮಾಡಿ ಅಳತೆ ನೋಡಿಕೊಂಡು ವಾಹನಕ್ಕೆ ತುಂಬಿಸಿಕೊಳ್ಳುವ ಜವಾಬ್ದಾರಿ ಗುತ್ತಿಗೆದಾರರದ್ದು ಆಗಿರುತ್ತದೆ ಗುತ್ತಿಗೆ ಅವಧಿ 02 ವರ್ಷ :–**

| ಕ್ರ. ಸಂ | ಟ್ಯಾಂಕರ್/ಬಿ.ಎಂ.ಸಿ. ಸರ್ವಿಸ್ ಮಾರ್ಗದ ಹೆಸರು | ವಾಹನ ಸಾಮರ್ಥ್ಯ ಟನ್‌ಗಳಲ್ಲಿ | ದಿನದ ಅಂತರ | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಶಿವಮೊಗ್ಗ ಬಿ.ಎಂ.ಸಿ –2 ಮಾರ್ಗ (ಕೆ.ಎನ್.ಪುರ, ಕಲ್ಲಿಹಾಳ್ ಸರ್ಕಲ್, ಯಡೇಹಳ್ಳಿ) ತಾತ್ಕಾಲಿಕ ಮಾರ್ಗ | 9.0 ಟನ್ | 75 ಕಿ.ಮೀ | 50,000/– | 2,00,000/– |
| 2 | ಶಿಕಾರಿಪುರ ಬಿ.ಎಂ.ಸಿ. ಮಾರ್ಗ (ಬಿಳಕಿ/ಬಾರಂಗಿ/ಮಲ್ಲಾಪುರ) | 9.0 ಟನ್ | 244 ಕಿ.ಮೀ | 50,000/– | 2,00,000/– |
| 3 | ಬಿ.ಎಂ.ಸಿ. ಸರ್ವಿಸ್ ಮಾರ್ಗ : ಶಿವಮೊಗ್ಗ ಡೈರಿಯಿಂದ ಒಕ್ಕೂಟದ ವ್ಯಾಪ್ತಿಯ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಬಿ.ಎಂ.ಸಿ ಕೇಂದ್ರ/ಸಂಘ/ಶೀತಲೀಕರಣ ಕೇಂದ್ರಗಳಿಗೆ ಭೇಟಿ ವಾಹನ. | ಬೋಲೆರೋ ಕ್ಯಾಂಪರ್ 4 ಸೀಟರ್ (2012 Model) | 3000 ಕಿ.ಮೀ | 20,000/– | 30,000/– |

II. <u>ಶಿವಮೊಗ್ಗ/ಧಾರವಾಡ/ಮತ್ತು ಬೆಂಗಳೂರಿನ ಉಗ್ರಾಣಗಳಿಗೆ ಕರ್ನಾಟಕ ಹಾಲು ಮಹಾ ಮಂಡಳಿಯ ಉತ್ಪನ್ನ ಘಟಕಗಳಿಂದ ಮತ್ತು ಹೊರ ರಾಜ್ಯದ ಈ ಕೆಳಕಂಡ ಡೈರಿಗಳಿಂದ ಹಾಲಿನ ಪುಡಿ ಮತ್ತು ಬೆಣ್ಣೆ ಸಾಗಾಣಿಕೆ ಮಾಡಲು 10 ಮತ್ತು 16 ಮೆ.ಟನ್ ಸಾಮರ್ಥ್ಯದ ಕನಿಷ್ಠ 3 ವಾಹನಗಳನ್ನು ಹೊಂದಿರುವ ವಾಹನ ಮಾಲೀಕರು ಟೆಂಡರ್ ಸಲ್ಲಿಸಬಹುದು. ಗುತ್ತಿಗೆ ಅವಧಿ 02 ವರ್ಷ, ಲೋಡಿಂಗ್ /ಅನ್ ಲೋಡಿಂಗ್ ಮತ್ತು ರಾಜ್ಯ / ರಾಷ್ಟ್ರೀಯ ಹೆದ್ದಾರಿ ಶುಲ್ಕ ಮತ್ತು ಸೇವಾ ತೆರಿಗೆ ಎಲ್ಲಾ ಸೇರಿ ಈ ಕೆಳಕಂಡ ವಿಭಾಗಗಳಿಗೆ ಪ್ರತ್ಯೇಕವಾಗಿ ಟನ್ ಒಂದಕ್ಕೆ ದರ ನಮೂದಿಸುವುದು. ಸಾಗಾಣಿಕೆ ವಿಮೆಯನ್ನು ಮಾತ್ರ ಒಕ್ಕೂಟದಿಂದ ಮಾಡಿಸಲಾಗುವುದು. ವಾಹನ ದಾಖಲಾತಿಗಳನ್ನು ಅಪಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.</u>

| ಕ್ರ. ಸಂ | ಘಟಕ/ಡೈರಿ | **ಹಾಲಿನ ಪುಡಿ/ಬೆಣ್ಣೆ ಸಾಗಾಣಿಕೆ ಮಾಡಬೇಕಾದ ಘಟಕ/ಡೈರಿ ಪ್ರತಿ ಟನ್‌ಗೆ ದರ ನಮೂದಿಸುವುದು.** | | | | | | | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|---|---|---|---|---|
| | | ಶಿವಮೊಗ್ಗ | | ಬೆಂಗಳೂರು | ಮಂಗಳೂರು | ಧಾರವಾಡ | | ಗುಲ್ಬರ್ಗ | | |
| | | ಹಾಲಿನ ಪುಡಿ | ಬೆಣ್ಣೆ | ಹಾಲಿನ ಪುಡಿ | ಬೆಣ್ಣೆ | ಹಾಲಿನ ಪುಡಿ | ಬೆಣ್ಣೆ | ಬೆಣ್ಣೆ | | |
| 4 | ಚನ್ನರಾಯ ಪಟ್ಟಣ ಡೈರಿ | | | | | | | | 50,000/– | 5,00,000/– |
| | ಡೆಂಪೋ ಡೈರಿ ಕರ್ನಾಟಕ | | | | | | | | | |
| | ಧಾರವಾಡ ಡೈರಿ ಕರ್ನಾಟಕ | | | | | | | | | |
| | ಮದರ್‌ಡೈರಿಬೆಂಗಳೂರು | | | | | | | | | |
| | ವಾರಣ ಡೈರಿ ಕೋಲ್ಲಾಪುರ ಮಹಾರಾಷ್ಟ್ರ | | | | | | | | | |
| | ವೈಷ್ಣೋವಿ ದೇವಿ ಡೈರಿ ಸೋಲ್ಲಾಪುರ ಮಹಾರಾಷ್ಟ್ರ, | | | | | | | | | |
| | ಪರಾಗ್ ಡೈರಿ ಆಂದ್ರ ಪ್ರದೇಶ | | | | | | | | | |
| | ಶಿವಮೊಗ್ಗ ಡೈರಿ | | | | | | | | | |
| | ಸೊನಾಯಿ ಡೈರಿ ಇಂದಾಪುರ, ಮಹಾರಾಷ್ಟ್ರ | | | | | | | | | |

## <u>ನಿಬಂಧನೆ ಮತ್ತು ಷರತ್ತುಗಳು</u>

1. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು.
2. ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.
3. ಕನಿಷ್ಠ ಇ.ಎಂ.ಡಿ. ರೂ. 20,000/– ಆದರೆ ಹಾಲಿನ ಪುಡಿ, ಬೆಣ್ಣೆ ಸಾಗಾಣಿಕೆ ಮಾರ್ಗದ ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲಿನ ಟ್ಯಾಂಕರ್‌ಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.

5. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು. ಮಾರ್ಗದ ವಿವರಗಳನ್ನೊಳಗೊಂಡ ಶೆಡ್ಯೂಲನ್ನು ಟೆಂಡರ್ ಫಾರಂನೊಂದಿಗೆ ಲಗತ್ತಿಸಲಾಗಿದೆ.

6. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ಟೆಂಡರ್‌ದಾರರು ಬದ್ಧವಾಗಿರಬೇಕು.

7. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

8. ತಾಂತ್ರಿಕ/ಯಾಂತ್ರಿಕ ಕಾರಣಗಳಿಂದ ಬಿ.ಎಂ.ಸಿ ಕೇಂದ್ರಗಳೇನಾದರೂ ಸ್ಥಗಿತಗೊಂಡು ಟ್ಯಾಂಕರ್ ಮೂಲಕ ಹಾಲು ಸಾಗಾಣಿಕೆ ಸ್ಥಗಿತಗೊಂಡಲ್ಲಿ ಹಾಲಿನ ಟ್ಯಾಂಕರ್‌ಗಳು ಚಲಿಸಿದ ಅಂತರಕ್ಕೆ ಮಾತ್ರ ಹಣ ಪಾವತಿಸಲಾಗುವುದು.

9. ಹಾಲಿನ ಪುಡಿ ಮತ್ತು ಬೆಣ್ಣೆ ಸಾಗಾಣಿಕೆ ಗುತ್ತಿಗೆದಾರರು, ಕಹಾಮ ಉತ್ಪನ್ನ ಘಟಕದಿಂದ ಹಾಗೂ ಹೊರ ರಾಜ್ಯಗಳಿಂದ ಒಕ್ಕೂಟದ ಬೇಡಿಕೆಯಂತೆ ಹಾಲಿನ ಪುಡಿ ಮತ್ತು ಬೆಣ್ಣೆಯನ್ನು ಪಡೆದು ಒಕ್ಕೂಟದ ಬೇಡಿಕೆ ಮತ್ತು ವೇಳಾಪಟ್ಟಿಯಂತೆ ಸಂಬಂಧಿಸಿದ ಉಗ್ರಾಣಗಳಿಗೆ ನೀಡತಕ್ಕದ್ದು, ಹಾಗೂ ಬೆಣ್ಣೆಯನ್ನು Insulated ವಾಹನದಲ್ಲಿ ಸಾಗಿಸುವುದು. ರಾಷ್ಟ್ರಿಯ/ರಾಜ್ಯ ಹೆದ್ದಾರಿ ಶುಲ್ಕಗಳನ್ನು ನೀಡಲಾಗುವುದಿಲ್ಲ ಹಾಗೂ ಸೇವಾ ತೆರಿಗೆಯನ್ನು ನಿಯಮಾವಳಿಯಂತೆ ಸಾರಿಗೆ ಬಿಲ್ಲಿನಲ್ಲಿ ಕಠಾಯಿಸಲಾಗುವುದು. ಬೆಣ್ಣೆ ಸಾಗಾಣಿಕೆಗೆ Insulated ವಾಹನ ಕಡ್ಡಾಯವಾಗಿರುತ್ತದೆ.

10. **ಬೋಲೆರೋ** ಕ್ಯಾಂಪರ್ 4 ಸೀಟರ್‌ಗೆ ಟೆಂಡರ್ ಹಾಕಬಯಸುವವರು ವಾಹನದ ಟ್ರೈಲರ್‌ನಲ್ಲಿ ಡೈರಿಯಿಂದ ನೀಡುವ **ಯಂತ್ರೋಪಕರಣಗಳು/ಉಗ್ರಾಣ ಸಾಮಾಗ್ರಿಗಳನ್ನು ಬಿ.ಎಂ.ಸಿ/ಸಿ.ಸಿ.ಗಳಿಗೆ** ಸುರಕ್ಷಿತವಾಗಿ ಸಾಗಿಸುವುದು. ಲೋಡಿಂಗ್ ಮತ್ತು ಅನ್‌ಲೋಡಿಂಗ್ ಗುತ್ತಿಗೆದಾರರ ಜವಾಬ್ದಾರಿ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಾರಿಗೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.

ದಿನಾಂಕ : 16.04.2015
ಸ್ಥಳ : ಮಾಚೇನಹಳ್ಳಿ

**ಹಾಲಿನ ಪುಡಿ/ಬೆಣ್ಣೆ ಸಾಗಾಣಿಕೆಯ ಅಂದಾಜು ದೂರದ ವಿವರ ಈ ಕೆಳಕಂಡಂತಿದೆ.**

**ಹಾಲಿನ ಪುಡಿಯನ್ನು ಕ್ಷೀರಭಾಗ್ಯ ಯೋಜನೆಯ ಕೋ ಪ್ಯಾಕಿಂಗ್ ಸೆಂಟರ್ ಬೆಂಗಳೂರು/ಧಾರವಾಡದಲ್ಲಿ ಅನ್‌ಲೋಡ್ ಮಾಡಬೇಕಾಗಿರುತ್ತದೆ.**

| ಕ್ರ. ಸಂ | ಘಟಕ/ಡೈರಿ | ಹಾಲಿನ ಪುಡಿ/ಬೆಣ್ಣೆ ಸಾಗಾಣಿಕೆ ಮಾಡಬೇಕಾದ ಘಟಕ/ಡೈರಿ ಪ್ರತಿ ಟನ್‌ಗೆ ದರ ನಮೂದಿಸುವುದು. | | | | | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|---|---|---|
| | | ಶಿವಮೊಗ್ಗ ಕಿ.ಮೀ | ಬೆಂಗಳೂರು ಕಿ.ಮೀ | ಮಂಗಳೂರು ಕಿ.ಮೀ | ಧಾರವಾಡ ಕಿ.ಮೀ | ಗುಲ್ಬರ್ಗ ಕಿ.ಮೀ | | |
| 4 | ಚನ್ನರಾಯ ಪಟ್ಟಣ ಡೈರಿ | 296 | 248 | 327 | 458 | 701 | 50,000/- | 5,00,000/- |
| | ಡೆಂಪೋ ಡೈರಿ ಕರ್ನಾಟಕ | 839 | 1000 | 524 | 280 | 480 | | |
| | ಧಾರವಾಡ ಡೈರಿ ಕರ್ನಾಟಕ | 468 | 788 | 400 | – | 600 | | |
| | ಮದರ್‌ಡೈರಿಬೆಂಗಳೂರು | 544 | 40 | 600 | 1000 | 1200 | | |
| | ವಾರಣ ಡೈರಿ ಕೋಲ್ಲಾಪುರ ಮಹಾರಾಷ್ಟ್ರ | 890 | 1350 | 1090 | 350 | 670 | | |
| | ವೈಷ್ಣೋವಿ ದೇವಿ ಡೈರಿ ಸೋಲ್ಲಾಪುರ ಮಹಾರಾಷ್ಟ್ರ, | 1058 | 1600 | 783 | 590 | 500 | | |
| | ಪರಾಗ್ ಡೈರಿ ಆಂಧ್ರಪ್ರದೇಶ | 1000 | 300 | 1200 | 800 | 600 | | |
| | ಶಿವಮೊಗ್ಗ ಡೈರಿ | – | 544 | 500 | – | – | | |
| | ಸೊನಾಯಿ ಡೈರಿ ಇಂದಾಪುರ, ಮಹಾರಾಷ್ಟ್ರ | 1220 | 1220 | 1000 | 500 | 800 | | |

## ಮೇಲೆ ನಮೂದಿಸಿರುವ ಅಂತರವು ಎರಡು ಬದಿಗೆ ಸೇರಿ ಅಂದಾಜು ಕಿ.ಮೀ. ಆಗಿರುತ್ತದೆ.

ಹಾಲಿನ ಪುಡಿಯನ್ನು ಒಕ್ಕೂಟವು ಸೂಚಿಸಿದ ಧಾರವಾಡ/ಬೆಂಗಳೂರಿನ ಕೋ–ಪ್ಯಾಕಿಂಗ್ ಸೆಂಟರ್‌ಗಳಲ್ಲಿ ಅನ್‌ಲೋಡ್ ಮಾಡಬೇಕಾಗಿರುತ್ತದೆ. ಕೋ–ಪ್ಯಾಕಿಂಗ್ ಸೆಂಟರ್‌ಗಳು ಧಾರವಾಡದಲ್ಲಿ ಬೇಗೂರು ಇಂಡಸ್ಟ್ರಿಯಲ್ ಏರಿಯದಲ್ಲಿ ಇರುತ್ತದೆ. ಬೆಂಗಳೂರಿನ ಶ್ರೀರಂಗ ಎಂಟರ್‌ಪ್ರೈಸಸ್ ಬನ್ನೆರುಘಟ್ಟ ರಸ್ತೆಯಲ್ಲಿರುತ್ತದೆ.